ಡಿಸ್ಪೆಸ್ ಫಾರ್ಮುಲಾದಲ್ಲಿ ಏನು ನಾವು ನೀರು ಕೊಟ್ಟಿದ್ದೇವೆಂದು ಇದಕ್ಕೆ ಅಲ್ಲಿ ಏನು ಕೊಡುತ್ತೀರಿ ಇದು ನಮಗೆ ಖಂಡಿತವಾಗಿ ಸಮರ್ಪಕವಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾನು ಮೊದಲಿನಿಂದಲೂ ನ್ಯಾಯ ಮಂಡಳಿಯನ್ನು ಬಹಿಷ್ಕಾರ ಮಾಡುವ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಬೇಕೆಂದು ನನ್ನ ವಾದವನ್ನು ಹೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು 1992ರಲ್ಲಿ ಸಂಪೂರ್ಣವಾಗಿ ಎಲ್ಲಾ ಕಡೆ ಹೋದಾಗ ನ್ಯಾಯ ಮಂಡಳಿಯನ್ನು ಬಹಿಷ್ಕಾರ ಮಾಡಲೇಬೇಕೆಂಬ ಮಾತನ್ನು ಸ್ಪಷ್ಟಪಡಿಸಿದ್ದಾರೆ. ಅದರ ಬಗ್ಗೆ ಬೇರೆ ಮಾತೇ ಇಲ್ಲ. ಈಗ ಅವರು ನ್ಯಾಯ ಮಂಡಳಿಗೆ ಜೋತು ಬಿದ್ದಿದ್ದಾರೆ. ನಾನು ಮೊದಲಿನಿಂದಲೂ ನ್ಯಾಯ ಮಂಡಳಿ ಬೇಡ ಎಂದು ವಿರೋಧ ಮಾಡತಕ್ಕ ಮನುಷ್ಯ. ಅದರಲ್ಲಿ ಎರಡನೆಯ ಅಭಿಪ್ರಾಯವಿಲ್ಲ. ಯಾರು ಏನೇ ಹೇಳಲಿ, ಅದರಿಂದ ತಾಂತ್ರಿಕ ತೊಂದರೆ ಆಗಬಹುದು, ನ್ಯಾಯಾಂಗ ತೊಂದರೆ ಆಗಬಹುದು, ನಮ್ಮ ತಲೆ ಮೇಲೆ ಬಂಡೆ ಬೀಳುತ್ತದೆಂದು ಕಥೆಗಳನ್ನು ಹೇಳಿದರೂ ನನಗೆ ಅದರ ಬಗ್ಗೆ ನಂಬಿಕೆ ಇಲ್ಲ. ನಾನು ಸ್ಪಷ್ಟಪಡಿಸುತ್ತಿದ್ದೇನೆ, ನ್ಯಾಯ ಮಂಡಳಿಯನ್ನು ಬಹಿಷ್ಕಾರ ಮಾಡುತ್ತೇವೆಂದು ಸರ್ಕಾರ ನೀತಿ ಬರಬೇಕಾದುದು ಕರ್ತವ್ಯ. ಆ ನೀತಿ ಬಂದಿಲ್ಲ. ಆದುದರಿಂದ ನಾನು ಧರಣಿ ಮಾಡುತ್ತಿದ್ದೇನೆ. ಏಕೆಂದರೆ ನನಗೆ ನ್ಯಾಯ ಮಂಡಳಿ ಬಗ್ಗೆ ನಂಬಿಕೆ ಇಲ್ಲ. ಖಂಡಿತ ಆ ತೀರ್ಪು ನಮಗೆ ಮರಣ ಶಾಸನವಾಗಿ ಬರುತ್ತದೆ. ಯಾರು ಏನೇ ಹೇಳಲಿ, ನಾನು ಅವತ್ತೂ ಹೇಳಿದ್ದೇವೆ, ಇವತ್ತೂ ಹೇಳುತ್ತೇನೆ. ನಮಗಂತೂ ಅದರಿಂದ ನೇಣುಗಂಬಕ್ಕೆ ಕನ್ನಡಿಗರನ್ನು ಏರಿಸತಕ್ಕ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದುದರಿಂದ ಇದನ್ನು ಈ ಸಭೆಯಲ್ಲಿ ಹೇಳಿದ್ದೇನೆ, ಹೊರಗೂ ಹೇಳಿದ್ದೇನೆ, ಎಲ್ಲಾ ಕಡೆಯೂ ಹೇಳಿದ್ದೇನೆ. ಆದುದರಿಂದ ಅದರಲ್ಲಿ ಬದಲಾವಣೆ ಮಾಡತಕ್ಕ ಮಾತು ಇಲ್ಲವೇ ಇಲ್ಲ. ಮತ್ತು ನೀರು ಬಿಟ್ಟಿರತಕ್ಕದ್ದನ್ನು ಒಪ್ಪತಕ್ಕ ಮಾತು ಇಲ್ಲವೇ ಇಲ್ಲ. ಆದುದರಿಂದ ನಾನು ತಮ್ಮ ಮುಂದೆ ಧರಣಿ ಮಾಡತಕ್ಕದ್ದು ನನ್ನ ನಿರ್ಧಾರ. ಆ ನಿರ್ಧಾರವನ್ನು ಬದಲಾವಣೆ ಮಾಡತಕ್ಕ ಪ್ರಶ್ನೆ ಇಲ್ಲವೇ ಇಲ್ಲ. ಇದು ಸರಿಯಿಲ್ಲ. ಏಕೆಂದರೆ ನಾನು ಮೊದಲಿನಿಂದ ಹೇಳುತ್ತಿದ್ದೇನೆ, ನ್ಯಾಯ ಮಂಡಲಿ ಬೇಡ ಎಂದು ಈ ನ್ಯಾಯ ಮಂಡಲಿ ಬೇಕಾಗಿದೆ? ಆ ತೀರ್ಪು ಬೇಕಾಗಿಲ್ಲವೆಂದು ಹೇಳುತ್ತೇನೆ. ಇದರಿಂದ ನಾವು ಉದ್ಧಾರವಾಗತಕ್ಕ ಪ್ರಶ್ನೆ ಬರುವುದಿಲ್ಲ. ಕರ್ನಾಟಕದ ಜನರಿಗೆ ಕನ್ನಡಿಗರಿಗೆ ಅದು ಒಳ್ಳೆಯದಲ್ಲ. ಕನ್ನಡಿಗರಿಗೆ ಮರಣ ಶಾಸನ ಬರೆಯತಕ್ಕ ಒಂದು ಅತ್ಯಂತ ಕೆಟ್ಟ ನ್ಯಾಯ ಮಂಡಳಿ ಎಂಬ ಮಾತನ್ನು ನಾನು ಸ್ಪಷ್ಟಪಡಿಸುತ್ತಿದ್ದೇನೆ. ಇದು ಯಾವ ದಿಕ್ಕಿಗೆ ಹೋದರೂ ಚಿಂತೆ ಇಲ್ಲ. ಇದರಲ್ಲಿ ಕುಳಿತುಕೊಂಡು ನೀವು ಲೆಕ್ಕಾಚಾರ ಹಾಕುವ ಪ್ರಶ್ನೆ ಇಲ್ಲ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್ ಅವರು ಸಭಾಧ್ಯಕ್ಷರ ಮುಂದಿನ ಅಂಕಣದಲ್ಲಿ ಧರಣಿ ಹೂಡಿದರು)

ಶ್ರೀ ಹೆಚ್.ಎನ್. ನಂಜೇಗೌಡ : ಬಹುಶಃ ನಾಳೆಗೂ ಚರ್ಚೆ ಮುಂದುವರಿದಿದ್ದರೆ, ಇವರು ಘನ ಕಾರ್ಯ ಮಾಡಿ ರಾಜ್ಯಕ್ಕೆ ಅನುಕೂಲ ಮಾಡಿದ್ದಾರೆ ಇನ್ನೆಷ್ಟು ಘನ ಕಾರ್ಯವನ್ನು ಅವರು ಮುಂದುವರಿಸಿಕೊಂಡು ಬರುತ್ತಿದ್ದಾರೆಂದು ಜನರಿಗೆ ಅರ್ಥವಾಗುತ್ತದೆ. ಈಗ ಏನಾಗಿದೆ ಎಂದರೆ

distress formula is an off-shoot of thee clarificatory order.

ಮಾನ್ಯ ಮುಖ್ಯಮಂತ್ರಿಗಳು ಹೇಳುವ ಪ್ರಕಾರ that is the clarificatory order. It is a clarification on the original interim order of the Tribunal. Distress formula which was formulated by Mr. Moily government, ಮಾನ್ಯ ಮೊಯಿಲಿಯವರು ಹೇಳುವ ಪ್ರಕಾರ `We did not formulate it. But, we accepted it.' ಎಂದು ಇವರು ಹೇಳುತ್ತಾರೆ.

ಶ್ರೀ ಎಂ. ವೀರಪ್ಪಮೊಯಿಲಿ : ನಾನು ಆ ರೀತಿ ಹೇಳಲಿಲ್ಲ. Page 29 of the clarificatory order which clearly said in clause 3 of the final order as: "The decision Tribunal made an apportionment of the utilisable quantum of the Narmada waters and also the sharing of the states concerned. In clause 4(2) of the final order, directions were given an available utilisable water falling short, the shortage should be shared between the states in the ratio mentioned in the said order."

So, the ratio has been prescribed by the clariification order. So, according to that, they wanted the calculation. We furnished the calculation in accordance with the frame of this order. That is all.

Sri H.N. NANJE GOWDA : That means, what I wanted to submit was Sir, they implicitly agreed to implement the interim order of the Tribunal.

ಇಷ್ಟೇ ನಾನು ಹೇಳುವುದಕ್ಕೆ ಹೊರಟಿದ್ದು. ಅಪಷ್ಯೂಟ್ ಎಂದು ಆಗಲಿ, ಅವರಾದರೂ ಫಾರ್ಮುಲೇಟ್ ಮಾಡಿರಲಿ, ಏನಾದರೂ ಮಾಡಿರಲಿ, ಒಂದು ರೀತಿ ಇವರು ಅಫೆಂಡರ್, ಅವರು ಅಬೇಟರ್. ಈಗಿನ ಸರ್ಕಾರ ಅಬೇಟರ್ ಇದ್ದಹಾಗೆ, ಹಿಂದಿನವರು ಅಫೆಂಟರ್ ಇದ್ದ ಹಾಗೆ ನನ್ನ ದೃಷ್ಟಿಯಲ್ಲಿ. ಅದನ್ನು ಅವರು ಒಪ್ಪದೇ ಇರಬಹುದು. ಈಗ ಏನು ಡಿಸ್ಟ್ರೆಸ್ ಫಾರ್ಮುಲಾ ಒಪ್ಪಿಕೊಂಡಿದ್ದಾರೆ, which is the root cause for making this government to allow 5 TMC ft. of water at the cost of Karnataka farmers' interests. ಇದಕ್ಕೆ ನಾವಂತೂ ಭಾಗಿ ಅಲ್ಲ. ಕರ್ನಾಟಕದ ಜನ ಕೂಡ ಇದಕ್ಕೆ ವಿರೋಧಿಗಳು. ನ್ಞಾವು ಕಡ್ಡಾಯವಾಗಿ ಇದಕ್ಕೆ ಭಾಗಿಗಳು ಅಲ್ಲ. ನಮ್ಮ ದೃಷ್ಟಿಯಲ್ಲಿ ಡಿಸ್ಟ್ರೆಸ್ ಫಾರ್ಮುಲಾ ತಪ್ಪು. ಏತಕ್ಕೆಂದರೆ ನಮ್ಮ ಒರಿಜಿನಲ್ ಸ್ಪಾಂಡ್ ಟ್ರಿಬ್ಯುನಲ್ಲಿನ ಇಂಟರಿಂ ಆರ್ಡರ್ ಅನ್ನು ಒಪ್ಪಬಾರದು ಎಂದು, ಇದು ರಾಜ್ಯದ ಜನತೆ ಹೇಳಿರತಕ್ಕದ್ದು. ಇಷ್ಟನ್ನು ತಾವು ಕ್ಲಾರಿಫೈ ಮಾಡಬೇಕು

ಅಧ್ಯಕ್ಷರು : ಈಗ ಹಿರಿಯ ಸದಸ್ಯರಾದ ಮಾನ್ಯ ವಾಟಾಳ್ ನಾಗರಾಜ್ ಅವರು ಎಷ್ಟು ಚೆನ್ನಾಗಿ

ಹೇಳಿದರು. ಅವರೊಬ್ಬರನ್ನು ಬೇರ್ಪಡಿಸಿ ಅಲ್ಲಿ ಕೂರಿಸಿಕೊಳ್ಳುವುದು ಸರಿಯಲ್ಲ. ಹಿರಿಯ ಸದಸ್ಯರನ್ನು ಅಲ್ಲಿ ಕೂರಿಸಿಕೊಂಡು ಇಲ್ಲಿ ಮಾತನಾಡುವುದು ಬೇಡ.

ಶ್ರೀ ಕೆ.ಎಸ್. ಈಶ್ವರಪ್ಪ: ವಿನಂತಿ ಮಾಡುತ್ತೇನೋ ಅಥವಾ ಸರ್ಕಾರಕ್ಕೆ ಏನು ಹೇಳಬೇಕು ಅದನ್ನೇ ಹೇಳುತ್ತಿದ್ದೇನೆ. ಇಡೀ ಕರ್ನಾಟಕ ರಾಜ್ಯದಲ್ಲಿ ನೀರು ಕೊಟ್ಟರು, ನೀರು ಕೊಡುವುದಕ್ಕೆ ಕಾರಣ ಅವರ ಮೇಲೆ ಹಾಕಿದರು. ಈಗ ನೀರು ಎಂದರೆ ಸೀಮೆಎಣ್ಣೆ ರೂಪವಾಗಿದೆ. ಸೀಮೆಎಣ್ಣೆ ಹಾಕಿದರು. ಅದಕ್ಕೆ ನೀವು ಬೆಂಕಿ ಕಡ್ಡಿ ಗೀರಿದ್ದೀರಿ. ನೀವು ಇದನ್ನು ಸಾಧನೆ ಮಾಡುವುದಕ್ಕೆ ಪ್ರೂವ್ ಮಾಡುವುದಕ್ಕೆ ಹೊರಟಿದ್ದೀರಿ. ಇದನ್ನು ಮಾತ್ರ ಇಡೀ ಕರ್ನಾಟಕದ ಜನ ಅಕ್ಷಮ್ಯ ಅಪರಾಧ ಎಂದು ಹೇಳುತ್ತೇನೆ. ಅದಕ್ಕೆ ಧ್ವನಿಗೂಡಿಸಿ ನಾವು ಧರಣಿ ಕುಳಿತು ಸರ್ಕಾರದ ಧೋರಣೆಯನ್ನು ಪ್ರತಿಭಟನೆ ಮಾಡಿ ಧರಣಿ ಕೂರುತ್ತಿದ್ದೇವೆ.

(ಬಿಜೆಪಿ.ಯ ಮಾನ್ಯ ಸದಸ್ಯರುಗಳು ಧರಣಿ ಕುಳಿತರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಹಾಗೆ ಹೇಳಿಲ್ಲವೆಂದು ಹೇಳಬೇಕಾಗುತ್ತದೆ. ಕೆಲವು ವಿಷಯಗಳನ್ನು ಈಗಾಗಲೇ ಮಾನ್ಯ ವೀರಪ್ಪ ಮೊಯಿಲಿಯವರು ಕ್ಲಾರಿಫೈ ಮಾಡಿದ್ದಾರೆ.

ಅಧ್ಯಕ್ಷರು : ಅವರು ಧರಣಿ ಮಾಡುವುದು, ನೀವು ಮಾತನಾಡುತ್ತಿರುವುದು ಸರಿಯೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವೂ ಕೂಡ ಧರಣಿಗೆ ಹೋಗುತ್ತಿದ್ದೇವೆ. ಏಕೆಂದರೆ ಅವರು ಇವತ್ತು ನಾವು ರೈಸ್ ಮಾಡಿದಂಥ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರ ಕೊಡಲಿಲ್ಲ. ೫ ಟಿಎಂಸಿ ನೀರನ್ನು ಏತಕ್ಕೆ ಬಿಟ್ಟರು, ಅದರ ಬಗ್ಗೆ ಹೇಳಲಿಲ್ಲ. ಪದೇ ಪದೇ ಡಿಸ್ಟ್ರೆಸ್ ಫಾರ್ಮುಲ ನಿಮ್ಮದು ಎಂದು ನಮ್ಮ ಮೇಲೆ ಅವರು ಅಪಾದನೆ ಮಾಡುತ್ತಿದ್ದಾರೆ.

(ಕಾಂಗ್ರೆಸ ಮಾನ್ಯ ಸದಸ್ಯರುಗಳು ಧರಣಿಗೆ ಕುಳಿತರು)

ಪ್ರಕಟಣೆ

ಅಧ್ಯಕ್ಷರು : ದಿನಾಂಕ 30ನೇ ಆಗಸ್ಟ 1995ರಂದು ಪ್ರಶ್ನೋತ್ತರ ವೇಳೆ ನಡೆಯುವ ಕಾರಣ ಸದನದಲ್ಲಿ ಉತ್ತರಿಸುವ ಹನ್ನೊಂದನೆ ಪಟ್ಟಿಯಲ್ಲಿರುವ 15 ಪ್ರಶ್ನೆಗಳ ಪೈಕಿ 14 ಪ್ರಶ್ನೆಗಳ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 95 ಪ್ರಶ್ನೆಗಳ ಪೈಕಿ 85 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದಿಡುತ್ತೇನೆ.

ಬನ್ನೂರಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸ್ಥಾಪನೆ

1832 - ಶ್ರೀ ಎಸ್. ಕೃಷ್ಣಪ್ಪ (ಬನ್ನೂರು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬನ್ನೂರು ಪುರಸಭೆ ವ್ಯಾಪ್ತಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;